**ಓ ಎಸ್ 24/2023 ಡಿಡಬ್ಲ್ಯೂ.2**

**ಸಾಕ್ಷಿಯನ್ನು ದಿಃ 09.02.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ವಾದಿ ಪರ ಶ್ರೀ ಹೆಚ್ ಎಸ್ ಎಸ್ ವಕೀಲರಿಂದಃ**

ರೂ.14,01,000/- ಪಡೆದುಕೊಂಡು ಪೂರಕ ಕರಾರು ಪತ್ರ ಆದ ನಂತರ ಕರೋನಾ ಅವಧಿಯಲ್ಲಿ ನಮ್ಮ ತಂದೆಯು ಕರೋನಾ ಪೀಡಿತರಾಗಿ ಆಸ್ಪತ್ರೆಯಲ್ಲಿ ದಾಖಲಾಗಿದ್ದರು ಎಂದರೆ ಸರಿ. ಆಗ ನಮ್ಮ ತಂದೆಯ ಚಿಕಿತ್ಸೆ ವೆಚ್ಚಕ್ಕಾಗಿ ವಾದಿಯಿಂದ ನಾವು ರೂ.50,000/- ಪುನಃ ಪಡೆದುಕೊಂಡಿದ್ದೇವೆ ಎಂದರೆ ಆ ಹಣವನ್ನು ಸಾಲವಾಗಿ ಪಡೆದುಕೊಂಡಿದ್ದೇವೆ. ಕ್ರಯದ ಕರಾರು ಪತ್ರದ ಅನುಸಾರ ಕ್ರಯಪತ್ರ ಬರೆದಕೊಡುವ ಸಲುವಾಗಿ ವಾದಿಯಿಂದ ಸದರಿ ರೂ.50,000/- ಹಣವನ್ನು ಪಡೆದುಕೊಂಡಿದ್ದೇವೆಯೇ ಹೊರತು ಸಾಲವಾಗಿ ಅಲ್ಲ ಎಂದರೆ ಕ್ರಯದ ಕರಾರು ಪತ್ರದ ಬಗ್ಗೆ ನನಗೆ ಏನು ಗೊತ್ತಿಲ್ಲ. ನಮ್ಮ ತಂದೆಯು ಕರೋನಾ ಕಾಲದಲ್ಲಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದಾಗ ವಾದಿಯ ಅಣ್ಣನವರು ನನ್ನ ಹೆಸರಿಗೆ ರೂ.50,000/- ಕ್ಕೆ ಚೆಕ್ಕನ್ನು ನೀಡಿದ್ದಾರೆ ಎಂದರೆ ಮಾನವೀಯತೆಯ ಹಿನ್ನಲೆಯಲ್ಲಿ ಕೊಟ್ಟಿದ್ದಾರೆ. ನಮ್ಮ ತಂದೆಯ ಆರೋಗ್ಯ ಸುಧಾರಿಸಿದ ನಂತರ ಮತ್ತು ಡಿ ಡಿ ಎಲ್ ಆರ್ ನ್ಯಾಯಾಲಯದಲ್ಲಿ ಪ್ರಕರಣವು ಇತ್ಯರ್ಥವಾಗಿ ದಾಖಲೆಗಳು ಸಿದ್ದವಾದ ನಂತರ ವಾದಿಯ ಹೆಸರಿಗೆ ಕ್ರಯಪತ್ರ ಬರೆದುಕೊಡುವುದಾಗಿ ಹೇಳಿ ನಾನು ಮತ್ತು ನನ್ನ ತಂದೆ ಈ ಮೇಲ್ಕಂಡ ತಲಾ ರೂ.50,000/- ಗಳನ್ನು ಪಡೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. ನನ್ನ ತಂದೆಯು ಗುಣಮುಖರಾಗದೆ ದಿನಾಂಕ 31.05.2021 ರಂದು ಮರಣ ಹೊಂದಿದರು ಎಂದರೆ ಸರಿ.

ಪಾಂಡವಪುರ ತಾಲ್ಲೋಕು, ಬನಘಟ್ಟ ಗ್ರಾಮದ ಸರ್ವೆ ನಂ. 43/2 ಮತ್ತು 43/2 ರ ಪೈಕಿ ಪಿ 1 ಕ್ಕೆ ಸಂಬಂದಿಸಿದ ದಾಖಲೆಗಳಲ್ಲಿ ನಮೂದಿಸಿರುವ ವಿಸ್ತೀರ್ಣಕ್ಕೂ

ವಾಸ್ತವಿಕ ಅನುಭವಕ್ಕೂ ವ್ಯಾತ್ಯಾಸ ಇದ್ದ ಕಾರಣ ಅದನ್ನು ಸರಿಪಡಿಸುವ ಸಲುವಾಗಿ ನಮ್ಮ ತಂದೆಯು ಬದುಕಿದ್ದ ಕಾಲದಲ್ಲಿ ಅವರು ಮೇಲ್ಮನವಿ ಸಂಖ್ಯೆಯ 51/20-21 ಸಲ್ಲಿಸಿದ್ದರು ಎಂದರೆ ಸರಿ. ನಮ್ಮ ತಂದೆ ಮರಣ ಹೊಂದಿದ ನಂತರ ನಾನು ಹಾಗೂ ನನ್ನ ಸಹೋದರಿಯರು ಸದರಿ ಮೇಲ್ಮನವಿಯಲ್ಲಿ ಪಕ್ಷಕಾರರಾಗಿ ಸೇರ್ಪಡೆಗೊಂಡು ಪ್ರಕರಣವನ್ನು ನಡೆಸಿದೆವು ಎಂದರೆ ಸರಿ. ಸದರಿ ಮೇಲ್ಮನವಿಯು ಪುರಸ್ಕಾರಗೊಂಡು ಪಹಣಿ ನಮೂದುಗಳನ್ನು ರದ್ದು ಮಾಡಿ ಎಲ್ಲಾ ಆರ್ ಟಿ ಸಿ ಗಳನ್ನು ಒಟ್ಟುಗೂಡಿಸಿ ದುರಸ್ತು ಮಾಡಿ ಹೊಸದಾಗಿ ಆರ್ ಟಿ ಸಿ ನಮೂದು ಮಾಡುವಂತೆ ಆದೇಶ ಮಾಡಿದ್ದಾರೆ ಎಂದರೆ ಸರಿ. ಅದರ ಅನುಸಾರ ತಹಶೀಲ್ದಾರ್ ರವರು ಕ್ರಮ ಕೈಗೊಂಡ ಕಾರಣ ಆರ್ ಟಿ ಸಿ ಯಲ್ಲಿ 0.37 ಗುಂಟೆಗೆ ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ.

ನಮ್ಮ ತಂದೆ ತೀರಿಕೊಂಡ ನಂತರ ವಾದಿಯು ನನ್ನ ಹಾಗೂ ನನ್ನ ಸಹೋದರಿ ಬಳಿ ಬಂದು ನಮ್ಮ ತಂದೆಯು ಕ್ರಯದ ಕರಾರು ಪತ್ರ ಮಾಡಿಕೊಟ್ಟಿದ್ದಾರೆ ಎಂದು ಮತ್ತು ಅದರ ಅನುಸಾರ ನಾವು ವಾದಿಗೆ ಕ್ರಯಪತ್ರ ಬರೆದುಕೊಡಬೇಕೆಂದು ಅವರು ನಮ್ಮನ್ನು ಕೇಳಿದರು ಎಂದರೆ ಸರಿ. ಆರ್ ಟಿ ಸಿ ಸರಿಯಾದ ನಂತರ ವಾದಿಗೆ ಕ್ರಯಪತ್ರ ಬರೆದುಕೊಡುವುದಾಗಿ ನಾವು ಭರವಸೆ ನೀಡಿದ್ದೆವು ಎಂದರೆ ಸರಿಯಲ್ಲ. ಹಾಗೆ ಭರವಸೆ ನೀಡಿದ ನಂತರವೂ ಸಹ ನಾವು ವಾದಿಯ ಮನವಿಗೆ ಸ್ಪಂದಿಸದ ಕಾರಣ ಅವರು ದಿನಾಂಕ 13.03.2023 ನನಗೆ ಮತ್ತು ನನ್ನ ಸಹೋದರಿಯರಿಗೆ ನೋಟೀಸು ಕಳುಹಿಸಿ ಕ್ರಯಪತ್ರವನ್ನು ಬರೆದುಕೊಡುವಂತೆ ಒತ್ತಾಯ ಮಾಡಿದ್ದರು ಎಂದರೆ ಸರಿ. ಸದರಿ ನೋಟೀಸಿನಲ್ಲಿರುವ ಸಂಗತಿಗಳನ್ನು ನಾನು ಓದಿದ್ದೇನೆ. ಆ ನೋಟೀಸಿಗೆ ನಾನು ಮರುತ್ತರ ನೀಡಿಲ್ಲ. ಹಾಗೆ ನೋಟೀಸು ಸ್ವೀಕರಿಸಿದ ನಂತರವೂ ನಾವು ವಾದಿಯ ಹೆಸರಿಗೆ ಕ್ರಯಪತ್ರ ಬರೆದುಕೊಡದ ಕಾರಣ ವಾದಿಯು ನಮ್ಮ ವಿರುದ್ಧ ಈ ದಾವೆಯನ್ನು ಹೂಡಿದ್ದಾರೆ ಎಂದರೆ ಸರಿ.

ಸರ್ವೆ ನಂ. 43/2 ವಿಸ್ತೀರ್ಣ 0.37 ಗುಂಟೆ ಜಮೀನು ನಮ್ಮ ತಂದೆಯ ಸ್ವಯಾರ್ಜಿತ ಆಗಿರುವ ಕಾರಣ ಮತ್ತು ಅವರು ಈಗ ಮೃತ ಹೊಂದಿರುವುದರಿಂದ ನಾನು ಹಾಗೂ ನನ್ನ ಸಹೋದರಿಯರು ಮಾತ್ರ ಆ ಆಸ್ತಿಯ ವಾರಸುದಾರರು ಎಂದರೆ ಸರಿ. ನಮ್ಮ ತಂದೆಯು ನಡೆಸಿರುವ ಎಲ್ಲಾ ವ್ಯವಹಾರಗಳ ಅರಿವು ಇದ್ದ ನಾನು ಹಾಗೂ ನನ್ನ ಸಹೋದರಿಯರು ನಮ್ಮ ತಂದೆಯು ಮೃತಪಟ್ಟ ನಂತರ ವಾದಿಗೆ ಮೋಸ ಮಾಡುವ ಸಲುವಾಗಿ ನಮ್ಮ ಕುಟುಂಬದ ಇತರೆ ಆಸ್ತಿಗಳನ್ನು ಒಳಗೊಂಡಂತೆ ಈ ದಾವಾ ಆಸ್ತಿಯನ್ನು ಸೇರಿಸಿ ಅಸಲು ದಾವಾ ಸಂಖ್ಯೆ 32/2022 ನ್ನು ವಿಭಾಗಕ್ಕಾಗಿ ಹೂಡಿದ್ದೇವೆ ಎಂದರೆ ವಾದಿಯೊಂದಿಗಿನ ಕ್ರಯದ ಕರಾರು ಪತ್ರದ ಬಗ್ಗೆ ನಮಗೆ ಏನು ಗೊತ್ತಿಲ್ಲ. ಅಸಲು ದಾವಾ ಸಂಖ್ಯೆ 70/2022 ನಮ್ಮ ತಂದೆಯ ತಂಗಿಯು ಭಾಗಕ್ಕಾಗಿ ಹೂಡಿದ್ದಾರೆ. ದಾವಾ ಷೆಡ್ಯೂಲ್ ಸರ್ವೆ ನಂ. 43/2 ರಲ್ಲಿನ 0.37 ಗುಂಟೆ ಜಮೀನು ನಮ್ಮ ತಂದೆಯ ಸ್ವಯಾರ್ಜಿತ ಆಗಿರುವ ಕಾರಣ ಆ ಆಸ್ತಿಯಲ್ಲಿ ನಮ್ಮ ತಂದೆಯ ತಂಗಿಗೆ ಅಂದರೆ ನಮ್ಮ ಸೋದರತ್ತೆಗೆ ಭಾಗಾಂಶದ ಹಕ್ಕು ಇಲ್ಲ ಎಂದರೆ ಸರಿ. ಕ್ರಯದ ಕರಾರು ಮಾಡಿಕೊಂಡಿರುವ ವಾದಿಗೆ ಮೋಸ ಮಾಡುವ ಸಲುವಾಗಿ ನಾವು ಹಾಗೂ ನಮ್ಮ ಸೋದರತ್ತೆ ಎಲ್ಲರೂ ಸೇರಿಕೊಂಡು ಕೇಸುಗಳನ್ನು ಹಾಕಿದ್ದೇವೆ ಎಂದರೆ ಸರಿಯಲ್ಲ. ಕ್ರಯದ ಕರಾರು ಪತ್ರದಡಿ ನಮ್ಮ ತಂದೆಯು ವಾದಿಯಿಂದ ರೂ.14,01,000/- ಪಡೆದುಕೊಂಡಿರುವುದರಿಂದ ಮತ್ತು ನಮ್ಮ ತಂದೆಯು ಕರೋನಾ ಕಾಲದಲ್ಲಿ ಕರೋನಾ ಪೀಡಿತರಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಅವರ ಚಿಕಿತ್ಸಾ ವೆಚ್ಚಕ್ಕಾಗಿ ನಾನು ನಮ್ಮ ತಂದೆಯ ನಿರ್ದೇಶನದಂತೆ ವಾದಿಯಿಂದ ರೂ.1,00,000/- ಪಡೆದುಕೊಂಡಿರುವ ಕಾರಣ ನಾನು ಹಾಗೂ ನನ್ನ ಸಹೋದರಿಯರು ವಾದಿಗೆ ಕ್ರಯಪತ್ರ ಬರೆದುಕೊಡಲು ಬದ್ಧರು ಎಂದರೆ ಸರಿಯಲ್ಲ. ನನಗೆ ಮತ್ತು ನನ್ನ ಸಹೋದರಿಯರಿಗೆ ಎಲ್ಲಾ ಸತ್ಯಾಸತ್ಯತೆ ಗೊತ್ತಿದ್ದರೂ ಸಹ ವಾದಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಂದೆ ವಿದ್ಯಾವಂತರು ಎಂದರೆ ಸರಿ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರಿಕೆಯ ಸಂಗತಿಗಳು ನನಗೆ ಖುದ್ದು ಗೊತ್ತಿಲ್ಲ. ಅದರಲ್ಲಿ ಏನೇನು ಸಂಗತಿಗಳನ್ನು ನಮೂದು ಮಾಡಿದ್ದಾರೆ ಎಂದು ನನಗೆ ಖುದ್ದು ಗೊತ್ತಿಲ್ಲ. ನಮ್ಮ ತಂದೆ ಬದುಕಿದ್ದಾಗ ಅಕ್ಕಿ ಗಿರಣಿ ಮತ್ತು ಕುಟುಂಬದ ಅಬಿವೃದ್ಧಿ ಖರ್ಚಿಗಾಗಿ ದಾವಾ ಆಸ್ತಿಯನ್ನು ಮಾರಾಟ ಮಾಡುವ ಇಚ್ಛೆಯನ್ನು ವ್ಯಕ್ತಪಡಿಸಿದಾಗ ವಾದಿಯು ದಾವಾ ಆಸ್ತಿಯಲ್ಲಿ ಮನೆಯನ್ನು ಕಟ್ಟಿಕೊಳ್ಳುವ ಆಸಕ್ತಿಯನ್ನು ಹೊಂದಿ ನಮ್ಮ ತಂದೆಯೊಂದಿಗೆ ಕ್ರಯದ ಕರಾರು ವ್ಯವಹಾರವನ್ನು ಮಾಡಿಕೊಂಡರು ಎಂದರೆ ಇರಬಹುದು.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**